ದಿನಾಂಕ 22-05-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 2ನೇ ಎದುರುದಾರರ ಪರ ಶ್ರೀ.ಟಿ.ಅರ್.ಜಿ ವಕೀಲರಿಂದಃ-

ಅಪಘಾತ ಬಸ್ಸಿನ ಚಾಲಕನ ತಪ್ಪಿನಿಂದ ಅಗಿಲ್ಲ. ನಾನೇ ಎಲ್ಲೋ ಬಿದ್ದು ಗಾಯ ಮಾಡಿಕೊಂಡಿದ್ದೇನೆಂದರೆ ಸರಿಯಲ್ಲ. ನಿಪಿ-8 ವೈದ್ಯಕೀಯ ಬಿಲ್ಲುಗಳನ್ನು ಕೇಸಿಗೋಸ್ಕರ ಸೃಷ್ಟಿಸಿ ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ. ನಿಪಿ-8 ರ ಜೊತೆಯಿರುವ ಸಲಹಾ ಚೀಟಿ ಔಷಧಿ ಪಡೆದುಕೊಟ್ಟಿರುವುದಲ್ಲ ಎಂದರೆ ಸರಿಯಲ್ಲ. ನಿಪಿ-8 ರಲ್ಲಿರುವ ದಿನಾಂಕ 27-11-2023. ನಾನು ಚಿಕಿತ್ಸೆ ಪಡೆದುಕೊಂಡದ್ದು ಸರ್ಕಾರಿ ಆಸ್ಪತ್ರೆಯಲ್ಲಿ ಎಂದರೆ ಸರಿ. ನಿಪಿ-7 ರಲ್ಲಿ ದಾಖಲಾದ ದಿನಾಂಕ 20.11.2023. ಡಿಸ್ಚಾರ್ಜ್ ದಿನಾಂಕ 25.11.2023. ಹೆಚ್ಚಿ ನ ಹಣ ಪಡೆಯುವ ಸಲುವಾಗಿ ಬಿಲ್ಲುಗಳನ್ನು ಸೃಷ್ಟಿಸಿದ್ದೇನೆಂದರೆ ಸರಿಯಲ್ಲ. 10 ದಿನಗಳ ನಂತರ ಪೊಲೀಸರ ಠಾಣೆಯಲ್ಲಿ ದೂರನ್ನು ಕೊಟ್ಟಿದ್ದೀರೆಂದರೆ ಸಾಕ್ಷಿ ಆಸ್ಪತ್ರೆಗೆ ಯಾವುದೇ ಪೊಲೀಸರು ಬರಲಿಲ್ಲ, ಅಸ್ಪತ್ರೆಯಿಂದ ಬಿಡುಗಡೆಯಾಗಿ ನಾನೇ ದೂರನ್ನು ಕೊಟ್ಟಿದ್ದೇನೆಂದು ನುಡಿಯುತ್ತಾರೆ. ಪರಿಹಾರ ಪಡೆಯುವ ಸಲುವಾಗಿ ಪೊಲೀಸರೊಂದಿಗೆ ಶಾಮಿಲಾಗಿ ಕೇಸನ್ನು ಸೃಷ್ಟಿಸಿದ್ದೇವೆಂದರೆ ಸರಿಯಲ್ಲ. ಅಸ್ಪತ್ರೆಯಿಂದ ಬಿಡುಗಡೆಯಾದ ನಂತರವೂ ಸಹ ಆಸ್ಪತ್ರೆಗೆ ಹೋಗಿದ್ದೇನೆ. ಯಾವುದೇ ಅಪಪಾತವಾಗಿಲ್ಲ, ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಈಗಲೂ ಆರೋಗ್ಯವಾಗಿದ್ದೇನೆಂದರೆ ಸರಿಯಲ್ಲ. ನನ್ನ ಆದಾಯಕ್ಕೆ ಯಾವುದೇ ಅನಾನುಕೂಲ ಅಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯ ಮಂಡಳಿಯ
ಪೀಠಾಧಿಕಾರಿಗಳು.